ಅಸಲು ದಾವಾ ನಂಃ 250/2021

ಪಿ.ಡಬ್ಲೂ 1

**4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ಧಾರವಾಡ.**

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **18.06.2026**

**ಮುಂದುವರೆದ ಪಾಟೀಸವಾಲುಃ 6 ನೇ ಪ್ರತಿವಾದಿ ಪರ ಶ್ರೀ. ಕೆ.ಎಲ್.ಪಿ. ವಕೀಲರಿಂದ**

2. ನಾನು ತಡಸಿನಕೊಪ್ಪದಲ್ಲಿ ಇದ್ದೆನೆ. ನಾನು ವಾದಿ ನಂಃ4, 5, 6, 7 ಮತ್ತು 3 ನೇ ಪ್ರತಿವಾದಿಗಳು ಒಟ್ಟಿಗೆ ವಾಸವಾಗಿದ್ದೇವೆ ಎಂದರೆ ಸರಿ. ನಮ್ಮ ಮನೆಯಲ್ಲಿ ಆಗುವ ಹೋಗುವ ಎಲ್ಲಾ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿರುತ್ತದೆ ಎಂದರೆ ನಾನು ಸಣ್ಣವನಿದ್ದಾಗ ಆಗಿರುವ ವ್ಯವಹಾರ ನನಗೆ ಗೊತ್ತಿಲ್ಲ. ಪ್ರತಿವಾದಿ ನಂಃ4, ವಾದಿ ನಂಃ15 ರಿಂದ 17 ಒಟ್ಟಿಗೆ ವಾಸವಾಗಿರುತ್ತಾರೆ ಎಂದರೆ ಸರಿ. 4 ನೇ ಪ್ರತಿವಾದಿಗೆ ಚೈತ್ರಾ ಎನ್ನುವ ಮಗಳು ಇದ್ದಾಳೆ ಎಂದರೆ ಸರಿ.

3. ನಮ್ಮ ಕುಟುಂಬಕ್ಕೆ ಒಟ್ಟು 3 ಎಕರೆ 7 ಗುಂಟೆ ಜಮೀನು ಇದೆ. ನಮಗೆ ಸ್ವಂತ ಮನೆ ಇದೆ ಎಂದರೆ ಸರಿ. 4 ನೇ ಪ್ರತಿವಾದಿ ಪೂರ್ವಜರ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಸದರಿ ಮನೆಗಳನ್ನು ಈ ದಾವೆಯಲ್ಲಿ ತೋರಿಸಿಲ್ಲ ಎಂದರೆ ಸರಿ. ಹನುಮಂತಪ್ಪ ಮೃತ ಪಟ್ಟ

ಪಿ.ಡಬ್ಲೂ 1

ನಂತರ 1 ನೇ ಪ್ರತಿವಾದಿಯ ಹೆಸರು ಕಂದಾಯ ದಾಖಲೆಗಳಲ್ಲಿ ನಮೂದಾಗಿರುತ್ತದೆ ಎಂದರೆ ನನಗೆ ನೆನಪಿಲ್ಲ. ಹನುಮಂತಪ್ಪ ಏನಾಗಿ ಮೃತ ಪಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಹನುಮಂತಪ್ಪರವರು ಕುಡಿಯುತ್ತಿದ್ದರು ಮತ್ತು ಸಾಲ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರಿಗೆ ಹುಷಾರಿಲ್ಲದೆ ತೀರಿಕೊಂಡರು ಎಂದರೆ ಆಗ ನಾನು ಹುಟ್ಟಿರಲಿಲ್ಲ.

4. ನಮ್ಮ ಮನೆಯ ವ್ಯವಹಾರ ನನ್ನ ಚಿಕ್ಕಪ-ದೊಡ್ಡಪ್ಪರವರಿಗೆ ಗೊತ್ತಿರುತ್ತದೆ ಎಂದರೆ ಸರಿ. ಉಳಿದ ವಾದಿಯರು ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಬಂದರೆ ಸತ್ಯ ಗೊತ್ತಾಗುತ್ತದೆ ಎಂದು ಅವರ ಪರವಾಗಿ ನಾನು ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ. 1 ಎಕರೆ ಜಮೀನನ್ನು 6 ನೇ ಪ್ರತಿವಾದಿ 2011 ರಲ್ಲಿ ಖರೀದಿಸಿರುತ್ತಾರೆ ಎಂದರೆ ನನಗೆ ನೆನಪಿಲ್ಲ. ನನ್ನ ಅಜ್ಜ ಮಾಡಿದ ಸಾಲದ ಉದ್ದೇಶದಿಂದ ಒಂದು ಎಕರೆ ಜಮೀನನ್ನು 1 ನೇ ವಾದಿ ಮತ್ತು ಅವರ ಮಕ್ಕಳು 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

5. 2013 ರಲ್ಲಿ 7 ನೇ ಪ್ರತಿವಾದಿಗೆ 2 ಎಕರೆ 7 ಗುಂಟೆ ಜಮೀನನ್ನು 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಮಾರಾಟ ಮಾಡಿದ್ದಾರೆ ಎಂದು ನನಗೆ ನೆನಪಿಲ್ಲ. 6 ನೇ ಪ್ರತಿವಾದಿ 1 ಎಕರೆ

ಖರೀದಿಸಿದ ನಂತರ ಅವರ ಹೆಸರಿಗೆ ಮುಟೇಷನ ಆಗಿರುತ್ತದೆ ಎಂದರೆ ನೆನಪಿಲ್ಲ. 6 ಮತ್ತು 7 ನೇ ಪ್ರತಿವಾದಿಗಳ ಹೆಸರಿಗೆ ಪ್ರತ್ಯೇಕವಾಗಿ ಮುಟೇಷನ ಇದೆ ಎಂದರೆ ನೆನಪಿಲ್ಲ.

6. ನಮ್ಮ ವ್ಯವಹಾರ ನನ್ನ ತಂದೆಯವರೆ ಮಾಡುತ್ತಾರೆ ಈಗ ಮಾಡುತ್ತಿದ್ದಾರೆ. ಮೊದಲು ಯಾರು ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿದಿರುತ್ತಾರೆ. ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದ ದಾಖಲೆಗಳನ್ನು ನಾನೇ ತೆಗೆಸಿದ್ದೇನೆ. ನಿಪಿಃ4 ಮತ್ತು 5 ನ್ನು ನನ್ನ ತಂದೆ ತೆಗೆದಿದ್ದಾರೆ ಎಂದರೆ ಸರಿ. ನಮ್ಮ ಊರಿನಲ್ಲಿ ಆಸ್ತಿಯ ಮೌಲ್ಯ ಕೋಟಿಗಟ್ಟಲೆ ಇರುತ್ತದೆ ಎಂದರೆ ಸರಿ.

7. 6 ಮತ್ತು 7 ನೇ ಪ್ರತಿವಾದಿಯರ ಆಸ್ತಿ ಕಬಳಿಸಲು ನಾವು ಮತ್ತು ಉಳಿದ ಪ್ರತಿವಾದಿಗಳು ಸೇರಿಕೊಂಡು ಸುಳ್ಳು ದಾವೆ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಮಗೆ ಯಾವುದೇ ಹಿಸ್ಸಾ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ದಾವೆ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

ಪಿ.ಡಬ್ಲೂ  1

**( ರಂಗಸ್ವಾಮಿ ಜೆ)**

4 ನೇ  ಹಿ ದಿ ನ್ಯಾ ಹಾಗೂ ಜೆಎಂಎಫ್‌ಸಿ,

ಧಾರವಾಡ.